ಅ) ಹೌದು

ಆ) ಈ ಕೆಲಸ ನಿರ್ವಹಣೆ ಮಾಡಿದ ಅಧಿಕಾರಿಯ ಮೇಲೆ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಇ) ಇಲ್ಲ

ಈ) ಹೌದು

ಉ) ಹೌದು

ಯು.ಕೆ.ಪಿ.ಯ ಅಲಮಟ್ಟಿ ಜಲಾಶಯದಿಂದ ಮುಳಿಗಡೆ ಆಗಿರುವ ಕೇಂದ್ರಗಳಲ್ಲಿ ಪುನರ್ವಸತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ

79 (66) - ಶ್ರೀ ಪೂಜಾರ್ ಪಿ ಹೆಚ್ (ಬಾಗಲಕೋಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯುಕೆಪಿಯ ಅಲಮಟ್ಟಿ ಜಲಾಶಯದಿಂದ ಮುಳುಗಡೆ ಆದ ನಂತರ ನಿರ್ಮಾಣವಾದ ಬಾಗಲಕೋಟೆ ತಾಲ್ಲೂಕಿನ ಸಿಮೀಕೇರಿ, ಬೆಣ್ಣೂರು, ತುಳಸಿಗೇರಿ ಪುನರ್ವಸತಿ ಕೇಂದ್ರಗಳಲ್ಲಿ ಸುಮಾರು 8-10 ಸಾವಿರಕ್ಕಿಂತ ಹೆಚ್ಚು ಜನವಸತಿ ಇರುವ ಕಾರಣ ಆರೋಗ್ಯ ಸಮಸ್ಯೆ ಉಂಟಾಗಿದ್ದು ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕೆನ್ನುವ ವಿಚಾರ ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು? ವಿವರಿಸುವುದು.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು

ಆ) ಸರ್ಕಾರಿ ನಿಬಂಧನೆಗಳ ಹಾಗೂ ಮಾರ್ಗಸೂಚಿಯ ಪ್ರಕಾರ ಮತ್ತು ಜನಸಂಖ್ಯೆ ಕಡಿಮೆ ಇರುವುದರಿಂದ, ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ ಮಾಡಲು ಬರುವುದಿಲ್ಲ. ಈಗ ಹಾಲಿ ರಾಂಪುರ ಮತ್ತು ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಬೆಣ್ಣೂರು ತುಳಸಿಗೇರಿ ಮತ್ತು ಸೀಮೆಗೇರಿ ಉಪಕೇಂದ್ರಗಳ ಮುಖಾಂತರ ಆರೋಗ್ಯ ಸೌಲಭ್ಯ ಒದಗಿಸಲಾಗುತ್ತಿದೆ.

ಬಾಗಲಕೋಟೆ ಜಿಲ್ಲೆಗೆ ಉದ್ಯೋಗ ಭರವಸೆ ಅಡಿ ಒದಗಿಸಿದ ಹಣ, ಖರ್ಚಾದ ಹಣದ ಬಗ್ಗೆ

80 (67) - ಶ್ರೀ ಪೂಜಾರ್ ಪಿ ಹೆಚ್ (ಬಾಗಲಕೋಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಜಿಲ್ಲಾ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000, 2000-01, 2001-2002ರ ಸಾಲುಗಳಲ್ಲಿ ಬಾಗಲಕೋಟೆ ಜಿಲ್ಲೆಗೆ ಉದ್ಯೋಗ ಭರವಸೆ ಯೋಜನೆಯಡಿ ಒದಗಿಸಲಾದ ಮತ್ತು ವೆಚ್ಚ ಮಾಡಿದ ಹಣವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) 1999-2000, 2000-2001, 2001-2002ರ ಸಾಲುಗಳಲ್ಲಿ ಬಾಗಲಕೋಟೆ ಜಿಲ್ಲೆಗೆ

ಶೌಚಾಲಯಗಳಿಗಾಗಿ ಬಿಡುಗಡೆ ಮಾಡಲಾದ ಮತ್ತು ವೆಚ್ಚ ಮಾಡಲಾದ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ.ವೈ. ಪೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಜಿಲ್ಲಾ ಪಂಚಾಯತ್ ರಾಜ್ಯ ಸಚಿವರು) :

ಕ್ರಮ ಸಂಖ್ಯೆ	ವರ್ಷ	ಬಿಡುಗಡೆಯಾದ ಅನುದಾನ	ವೆಚ್ಚ
1	1999-2000	277-05	222-50
2	2000-2001	396.17	189.61
3	2001-2002	302.87	335.62

ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ತೋರಿಸಿದೆ.

ಅ)

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ವರ್ಷ	ಬಿಡುಗಡೆಯಾದ ಅನುದಾನ	ವೆಚ್ಚ
1	1999-2000	66.16	76.55
2	2000-2001	20.01	45.65
3	2001-2002	55.32	56.05

ತಾಲ್ಲೂಕುವಾರು ವಿವರಗಳನ್ನು ಅನುಬಂಧ-2 ರಲ್ಲಿ ತೋರಿಸಿದೆ.

ಅನುಬಂಧ -1

ಉದ್ಯೋಗ ಭರವಸೆ ಯೋಜನೆಯಡಿ ಬಿಡುಗಡೆಯಾದ ಅನುದಾನ ಮತ್ತು ಖರ್ಚಾದ ವಿವರಗಳ ಮಾಹಿತಿ

ಕ್ರಮ ಸಂಖ್ಯೆ	ವರ್ಷ	ತಾಲ್ಲೂಕು	ಬಿಡುಗಡೆ ಮಾಡಿದ ಅನುದಾನ	ವೆಚ್ಚ ಮಾಡಿದ ವಿವರ
1	1999-2000	1. ಬಾಗಲಕೋಟೆ	8.00	37.69
		2. ಬಾದಾಮಿ	8.00	25.50
		3. ಬೀಳಗಿ	8.00	38.79
		4. ಜಮಖಂಡಿ	8.00	35.30
		5. ಮುಧೋಳ್	8.00	39.53
		6. ಹುನಗುಂದ	8.00	34.28

		7. ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ	90.00	14.16
		ಒಟ್ಟು	**138.00**	**222.50**
2	2000-2001	1. ಬಾಗಲಕೋಟೆ	14.96	4.99
		2. ಬಾದಾಮಿ	11.97	6.00
		3. ಬೀಳಗಿ	12.96	7.50
		4. ಜಮಖಂಡಿ	18.69	13.22
		5. ಮುಧೋಳ್	14.40	5.94
		6. ಹುನಗುಂದ	11.96	16.15
		7. ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ	203.32	135.81
		ಒಟ್ಟು	**288.26**	**189.61**
3	2001-2002	1. ಬಾಗಲಕೋಟೆ	7.50	17.05
		2. ಬಾದಾಮಿ	11.05	15.18
		3. ಬೀಳಗಿ	6.90	12.66
		4. ಜಮಖಂಡಿ	10.47	18.47
		5. ಮುಧೋಳ್	8.20	20.03
		6. ಹುನಗುಂದ	8.85	9.85
		7. ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ	141.86	242.33
		8. ಜಿಲ್ಲಾ ಜಲಾನಯನ ಅಭಿವೃದ್ಧಿ ಬಾಗಲಕೋಟೆ	158.81	0.05
		ಒಟ್ಟು	**353.58**	**335.62**

ಅನುಬಂಧ 2

ಶೌಚಾಲಯ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿದ ಅನುದಾನ ಹಾಗೂ ಖರ್ಚು ಮಾಡಿದ ವಿವರಗಳ ಮಾಹಿತಿ

1	1999-2000	1. ಬಾದಾಮಿ	12.15	13.85
		2. ಬಾಗಲಕೋಟೆ	10.07	9.00
		3. ಬೀಳಗಿ	7.97	8.44

		4. ಮುಧೋಳ್	9.46	6.67
		5. ಜಮಖಂಡಿ	15.56	8.30
		6. ಹುನಗುಂದ	10.95	30.39
		ಒಟ್ಟು	**66.16**	**76.55**
2	2000-2001	1. ಬಾದಾಮಿ	3.99	8.93
		2. ಬಾಗಲಕೋಟೆ	3.01	6.82
		3. ಬೀಳಗಿ	2.47	7.27
		4. ಮುಧೋಳ್	2.63	11.61
		5. ಜಮಖಂಡಿ	4.33	10.29
		6. ಹುನಗುಂದ	3.58	0.73
		ಒಟ್ಟು	**20.01**	**45.65**
3	2001-2002	1. ಬಾದಾಮಿ	5.53	10.87
		2. ಬಾಗಲಕೋಟೆ	18.38	15.13
		3. ಬೀಳಗಿ	3.07	3.58
		4. ಮುಧೋಳ್	3.83	4.63
		5. ಜಮಖಂಡಿ	19.91	16.54
		6. ಹುನಗುಂದ	4.60	5.30
		ಒಟ್ಟು	**55.32**	**56.05**

ಬಾಗಲಕೋಟೆ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ ಬಗ್ಗೆ

82 (71) - ಶ್ರೀ ಪಿ ಹೆಚ್ ಪೂಜಾರ್ (ಬಾಗಲಕೋಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆಯಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿಯ ಶಿಕ್ಷಣ ಗುಣಮಟ್ಟ ಕುಸಿದು ವಿದ್ಯಾರ್ಥಿಗಳು ತೊಂದರೆ ಅನುಭವಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಾಗಲಕೋಟೆ ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕೊರತೆಯಿರುವ ಶಿಕ್ಷಕರ ಸಂಖ್ಯೆ ಎಷ್ಟು?

ಇ) ಶಿಕ್ಷಕರ ಕೊರತೆ ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಯಾವ ಹಂತದಲ್ಲಿದೆ? (ವಿವರ ನೀಡುವುದು)

ಪ್ರೊ|| ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :